<u>ಕರ್ನಾಟಕ ಸರ್ಕಾರ</u>

ಸಂ:ಸಾರಿಇ 407 ಸಾಇಪ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:09-11-2006.

## ಅಧಿಸೂಚನೆ

ಮೋಟಾರು ವಾಹನಗಳ ಅಧಿನಿಯಮ 1988 (ಕೇಂದ್ರ ಅಧಿನಿಯಮ ಸಂ: 59/88) ರ ಕಲಂ-67(1)ರಡಿ ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ:ಒಸಾಇ 4 ಟಿಎಂಎ 98, ದಿನಾಂಕ:06.06.98ನ್ನು ಹೊರಡಿಸಿ ಕರ್ನಾಟಕದಲ್ಲಿ ಎಲ್ಲಾ ನಗರಗಳಿಂದ 25 ಕಿ.ಮೀ. ಪರಿಧಿಯಲ್ಲಿ ಪ್ರವರ್ತಿಸುವ ಸಿಟಿ ಟ್ಯಾಕ್ಸಿಗಳಿಗೆ (ಮೋಟಾರ್ ಕ್ಯಾಬ್) ಕನಿಷ್ಟ ಮತ್ತು ಗರಿಷ್ಟ ದರಗಳು ಮತ್ತು ಸಾಗಾಣಿಕೆ ದರಗಳನ್ನು ನಿಗದಿಪಡಿಸಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ ಹಾಗೂ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಿತ್ತು. ಆನಂತರ, ಅಧಿಸೂಚನೆ ಸಂ:ಒಸಾಇ 175 ಟಿಎಂಎ 99, ದಿನಾಂಕ:24.02.2001 ರಲ್ಲಿ ಸದರಿ ದರಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿತ್ತು.

ಇತ್ತೀಚೆಗೆ ಕೇಂದ್ರ ಸರ್ಕಾರವು ಪೆಟ್ರೋಲ್, ಡೀಸೆಲ್, ಗ್ಯಾಸ್ ಇತ್ಯಾದಿಗಳ ಬೆಲೆಗಳನ್ನು ಹೆಚ್ಚಿಸಿರುವ ಹಿನ್ನಲೆಯಲ್ಲಿ ಸಿಟಿ ಟ್ಯಾಕ್ಸಿ (ಮೋಟಾರ್ ಕ್ಯಾಬ್) ಗಳ ದರ ಮತ್ತು ಸಾಗಾಣಿಕೆ ದರಗಳನ್ನು ಪುನ: ಪರಿಷ್ಕರಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವುದು ಅಗತ್ಯವೆಂದು ಕರ್ನಾಟಕ ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ:-

ಮೋಟಾರು ವಾಹನಗಳ ಅಧಿನಿಯಮ, 1988ರ (ಕೇಂದ್ರ ಅಧಿನಿಯಮ 59/88) 67ನೇ ಕಲಂನ (1) ನೇ ಉಪಕಲಂ (i) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಸಂಬಂಧದಲ್ಲಿ ಹೊರಡಿಸಲಾದ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರಾಜ್ಯದ ಎಲ್ಲಾ ನಗರಗಳ 25 ಕಿ.ಮೀ. ಪರಿಧಿಯಲ್ಲಿ ಪ್ರವರ್ತಿಸುವ ಸಿಟಿ ಟ್ಯಾಕ್ಸಿ (ಮೋಟಾರು ಕ್ಯಾಬ್ಸ್)ಗಳ ದರಗಳು ಹಾಗೂ ಸಾಗಾಣಿಕೆ ದರಗಳಿಗೆ ಸಂಬಂಧಿಸಿದಂತೆ ಮಾತ್ರ ಮಾರ್ಪಾಡು ಮಾಡಿ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಮುಂದಿನ ನಿರ್ದೇಶನಗಳನ್ನು ನೀಡಿರುತ್ತದೆ.

## ನಿರ್ದೇಶನಗಳು

ಕರ್ನಾಟಕದ ಎಲ್ಲಾ ನಗರಗಳ ಮಿತಿಯಿಂದ 25 ಕಿ.ಮೀ. ಪರಿಧಿಯೊಳಗೆ ಸಂಚರಿಸುವ ಸಿಟಿ ಟ್ಯಾಕ್ಸಿ (ಮೋಟಾರ್ ಕ್ಯಾಬ್ಸ್) ಪ್ರತ್ಯೇಕ ವರ್ಗಕ್ಕೆ ತಕ್ಷಣವೇ ಜಾರಿಗೆ ಬರುವಂತೆ ಈ ಕೆಳಗೆ ನಿಗದಿಪಡಿಸಲಾದ ಕನಿಷ್ಟ ಮತ್ತು ಗರಿಷ್ಟ ದರಗಳು ಮತ್ತು

...2

ಸಾಗಾಣಿಕೆ ದರಗಳನ್ನು ನಿಗದಿಪಡಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

1) 4 ಕಿ.ಮೀ.ಗೆ ಕನಿಷ್ಟ ದರ - ರೂ.50.00

2) ಅನಂತರದ ಪ್ರತಿ ಕಿ.ಮೀ.ಗೆ - ರೂ.12.00

3) ಕಾಯುವಿಕೆ ದರ - ಮೊದಲಿನ 20 ನಿಮಿಷಗಳವರೆಗೆ ಉಚಿತ, ಅನಂತರದ ಪ್ರತಿ 15 ನಿಮಿಷಗಳಿಗೆ ಅಥವಾ ಅದರ ಭಾಗಕ್ಕೆ ರೂ.10.00

4) ಲಗೇಜ್ ದರಗಳು - ಮೊದಲಿನ 120 ಕೆ.ಜಿ.ವರೆಗೆ ಉಚಿತ (ಸೂಟ್‌ಕೇಸ್, ಬೆಡ್ಡಿಂಗ್ಸ್ ಇತ್ಯಾದಿ ವೈಯಕ್ತಿಕ ಲಗೇಜುಗಳು) ಅನಂತರದ ಪ್ರತಿ 20 ಕಿ.ಗ್ರಾಂ.ಗೆ ಅಥವಾ ಅದರ ಭಾಗಕ್ಕೆ ರೂ.5.00

ಟಿಪ್ಪಣಿ :-

ರಾತ್ರಿ 10 ಗಂಟೆಯಿಂದ ಬೆಳಗಿನ 6 ಗಂಟೆವರೆಗೆ ಅಥವಾ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ ಹೊರಗಿನ ಸಂಚಾರಕ್ಕೆ ನಿಗದಿತ ದರಕ್ಕಿಂತ ಒಂದೂವರೆ ಪಟ್ಟು ಮೀರಬಾರದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

9/11/06.
(ಶಿವರಾಮಶೆಟ್ಟಿ)
ಪೀಠಾಧಿಕಾರಿ
ಸಾರಿಗೆ ಇಲಾಖೆ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ರಾಜ್ಯಪತ್ರಿಕೆಗಳಲ್ಲಿ ಪ್ರಕಟಿಸಿ ಸದರಿ ಪ್ರತಿಗಳ ತಲಾ 100 ಪ್ರತಿಗಳನ್ನು ಪೀಠಾಧಿಕಾರಿ, ಸಾರಿಗೆ ಇಲಾಖೆ ಹಾಗೂ ಸಾರಿಗೆ ಆಯುಕ್ತರು, ಬೆಂಗಳೂರು ಇವರಿಗೆ ಪೂರೈಸುವಂತೆ ಕೋರಿದೆ.

ಪ್ರತಿಗಳು:

1. ಸಾರಿಗೆ ಆಯುಕ್ತರು, ಬೆಂಗಳೂರು.
2. ಎಲ್ಲಾ ಜಂಟಿ ಸಾರಿಗೆ ಆಯುಕ್ತರುಗಳಿಗೆ.
3. ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು.
4. ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆರವರ ಆಪ್ತ ಸಹಾಯಕರು.
6. ಸರ್ಕಾರದ ಉಪ ಕಾರ್ಯದರ್ಶಿ, ಸಾರಿಗೆ ಇಲಾಖೆರವರ ಆಪ್ತ ಸಹಾಯಕರು.
7. ಶಾಖಾ ರಕ್ಷಾ ಕಡತ/ಕಚೇರಿ ಪ್ರತಿ/ಹೆಚ್ಚುವರಿ ಪ್ರತಿ.